**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.**

**OS No.** 189/2023

**PW**:3

**ದಿನಾಂಕ 29.07.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ರಿಂದ 5 ನೇ ಪ್ರತಿವಾದಿ ಪರ ಶ್ರೀ.ಎ.ಆರ್.ಕೆ. ವಕೀಲರಿಂದ:**

ನಮ್ಮ ಖಾಯಂ ವಾಸ ಇಂಚಗೇರಿ ಇರುತ್ತದೆ. ನಾವು ಇಂಚಗೇರಿ ಗ್ರಾಮದವರು ಇರುವುದಿಲ್ಲ ಬದಲಾಗಿ ಇಂಡಿಯವರು ಎಂದರೆ ಸರಿಯಲ್ಲ. ವಾದಿಯರ ತಂದೆ ಚನ್ನಬಸಪ್ಪ ಇವರ ಹೆಸರಿನಲ್ಲಿ 22 ಎಕರೆ ಜಮೀನು ಇರುತ್ತದೆ. ಸದರಿ 22 ಎಕರೆ ಜಮೀನಿನ ಪೈಕಿ 5 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ಸದರಿ 5 ಎಕರೆ ಜಮೀನನ್ನು ಶ್ರೀಮಂತಗೌಡ ಬಿರಾದಾರ ಇವರಿಗೆ ಮಾರಾಟ ಮಾಡಿರುತ್ತಾರೆ. ಸದರಿ 5 ಎಕರೆ ಜಮೀನನ್ನು ವಾದಿಯ ಮದುವೆಯ ಸಲುವಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ 5 ಎಕರೆ ಜಮೀನನ್ನು ವಾದಿಯ ಮದುವೆಯ ಸಲುವಾಗಿ ಮಾರಾಟ ಮಾಡಿದ್ದರು ಇಲ್ಲವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಾದಿಯರ ಮನೆತನಕ್ಕೆ ಎಷ್ಟು ಆಸ್ತಿಗಳು ಇರುತ್ತವೆ ಮತ್ತು ಅವುಗಳ ಸರ್ವೆ ನಂಬರ ಹೇಳಲು ಬರುವುದಿಲ್ಲ.

2016-17 ನೇ ಇಸವಿಯಲ್ಲಿ ಚನ್ನಬಸಪ್ಪ ಇವರು ಎಲ್ಲರಿಗೂ ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. 2016-17 ರಲ್ಲಿ ಆದ ವಾಟ್ನಿ ಪ್ರಕಾರ ಉತಾರ ಬೇರೆ ಬೇರೆ ಆಗಿರುತ್ತವೆ ಎಂದರೆ ಸರಿ. ಸದರಿ ವಾಟ್ನಿ ಪ್ರಕಾರ ವಾದಿಗೆ 2 ಎಕರೆ 4 ಗುಂಟೆ ಆಸ್ತಿ ಬಂದಿರುತ್ತದೆ ಎಂದರೆ ಸರಿ. ಸೋಮನಿಂಗಪ್ಪ ಇವರು ಮನೆಯ ಯಜಮಾನಿಕೆಯನ್ನು ಮಾಡಿ ಮನೆಯ ಎಲ್ಲಾ ಖರ್ಚು ವೆಚ್ಚಗಳನ್ನು ಮಾಡುತ್ತಿದ್ದರು ಎಂದರೆ ಸರಿ. ವಾದಿ ಜಯಶ್ರೀ ಇವರಿಗೆ ಮದುವೆ ಮಾಡಿ ಕೊಟ್ಟಿರುವುದು ನನಗೆ ಗೊತ್ತಿರುತ್ತದೆ. ನಂತರ ವಾದಿ ಗಂಡ ಮರಣ ಹೊಂದಿರುತ್ತಾರೆ ಎಂದರೆ ಸರಿ. ವಾದಿಗೆ ಸೋಮನಿಂಗಪ್ಪ ಇವರು ಇಲ್ಲಿಯವರೆಗೂ ಅವರ ಖರ್ಚು ವೆಚ್ಚಗಳನ್ನು ನೋಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ವಾಟ್ನಿಯ ಪ್ರಕಾರ ಎಲ್ಲರೂ ತಮ್ಮ ತಮ್ಮ ಹಿಸ್ಸೆಯಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ಸಾಕ್ಷ್ಯಾ ಪ್ರಮಾಣ ಪತ್ರಿಕೆಗೆ ವಾದಿಯು ಮಾಹಿತಿ ನೀಡಿರುತ್ತಾರೆ. ನನ್ನ ಸಾಕ್ಷ್ಯಾ ಪ್ರಮಾಣ ಪತ್ರಿಕೆಯಲ್ಲಿ ಬರೆದಿರುವುದು ಎಲ್ಲಾ ಗೊತ್ತಿರುತ್ತದೆ. ನಾನು ಸುಳ್ಳು ಸಾಕ್ಷ್ಯಾಪ್ರಮಾಣ ಪತ್ರಿಕೆಯನ್ನು ಸಲ್ಲಿಸಿ

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಾದಿ ಮತ್ತು ಪ್ರತಿವಾದಿಯರ ಮನೆತನದ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.